ಕಥೆ

# ಗೆರೆಗಳು



**ಸದಾಶಿವ ಸೊರಟೂರು**

ಕಲೆ: ವಿ.ಎಂ. ಮಂಜುನಾಥ್

ಗಿರಿಜಿ, ಮೈದುನ ನಂದೀಶ ಇಬ್ಬರೂ ಆಟೋದಿಂದ ಇಳಿಯುವಾಗ ಹರಿಹರದಲ್ಲಿ ಜೋರು ಮಳೆ. ಇಳಿದು, ಸರ್ಕಾರಿ ಆಸ್ಪತ್ರೆಯ ಕಮಾನು ದಾಟಿ ಒಳಗೆ ಹೋಗುವ ಹೊತ್ತಿಗೆ ಇಬ್ಬರೂ ನೆನೆದು ಹೋಗಿದ್ದರು. ಗಿರಿಜಿ, ಎಡಗೈಲಿ ಮಡಚಿದ ಬಿಳಿ ಹಾಳೆಯೊಂದನ್ನು ತನ್ನ ಪ್ರಾಣದಂತೆ ಹಿಡಿದಿದ್ದಳು. ಆಸ್ಪತ್ರೆ ಗಿಜುಗುಡುತ್ತಿತ್ತು. ಒಳಗೆ ಹಾಸಿಗೆಯ ಮೇಲೆ ಮಲಗಿದವರ ಪ್ರಾಣಗಳನ್ನು ತನ್ನ ಗಂಟಲಲ್ಲಿಟ್ಟುಕೊಂಡ ಆಸ್ಪತ್ರೆ ಸಂಕಟ ಉಣ್ಣುತ್ತಿತ್ತು. ಥಂಡಿ, ಮಳೆ; ಗಿರಿಜಿ ಸಣ್ಣಗೆ ಬೆವೆತಿದ್ದಳು. ಮಧ್ಯಾಹ್ನ ಅನ್ನೋದು ಮುಂಜಾವೊ, ಮುಸ್ಸಂಜೆಯೊ ಎನ್ನುವಂತಾಗಿತ್ತು.

ತುಸು ಎತ್ತರದ, ಪೀಚಲು ದೇಹದ ಗಿರಿಜಿಯ ಕೂದಲು ಕೆದರಿದ್ದವು. ಆಕೆಗೆ ಮೂವತ್ತು ವರ್ಷ, ನಲವತ್ತರಂತೆ ಕಾಣುತ್ತಿದ್ದಳು. ಮಡಚಿ ಕೈಯಲ್ಲಿಟ್ಟುಕೊಂಡಿದ್ದ ಪತ್ರವನ್ನು ಎರಡ್ಮೂರು ಬಾರಿ ನೋಡಿಕೊಂಡಳು. ಆತುರಾತುರದಲ್ಲಿ ಮೈದುನನ್ನು ಕರೆದುಕೊಂಡು ಆಸ್ಪತ್ರೆ ಹೊಕ್ಕಳು. ಫಿನಾಯಿಲ್ ವಾಸನೆ ಮೂಗಿಗೆ ಬಡಿಯಿತು.

ಅರ್ಧ ತೋಳಿನ ಬಿಳಿ ಅಂಗಿಯ ನರ್ಸ್ ಕೂತಿದ್ದಳು. ಮೊಬೈಲ್ ನೋಡುತ್ತಾ ಒಬ್ಬಳೇ ನಗುತ್ತಿದ್ದ ಅವಳ ಬಳಿ ಏನೇನೊ ಕೇಳಿ ಆ ಪತ್ರ ತೋರಿಸಿದಳು. ನರ್ಸು ಉಡಾಫೆಯಲ್ಲಿ ಕೈ ತೋರಿಸಿ ಎರಡನೆಯ ಮಹಡಿಯ ರೂಮು ನಂಬರ್ ನಾಲ್ಕಕ್ಕೆ ಹೋಗಿ ಎಂದಳು. ಗಿರಿಜಿ ಮತ್ತು ನಂದೀಶ ಒಂದೇ ಉಸಿರಿಗೆ ಮಹಡಿ ತಲುಪಿದರು.

ರೂಮು ನಂಬರ್ ನಾಲ್ಕರಲ್ಲಿ ಒಂದಿಬ್ಬರು ಹರಟುತ್ತಾ ಕೂತಿದ್ದರು. ಗೋಡೆ ತುಂಬಾ ಕಾಯಿಲೆ ಕುರಿತ ಸರ್ಕಾರಿ ಜಾಹೀರಾತುಗಳು. ನೇರವಾಗಿ ಒಳಗೆ ಹೋದವಳೇ ಅವರ ಕೈಯಲ್ಲಿ ಪತ್ರವಿಟ್ಟಳು. ಅವರು ಇವಳನ್ನು 'ಏನು..?' ಎಂಬಂತೆ ನೋಡಿದರು. ಒಣಗಿದ ಗಂಟಲಿನಿಂದ ಮಾತು ಸಲೀಸಾಗಿ ಆಚೆ ಬರಲಿಲ್ಲ. ತೊದಲುತ್ತಿದ್ದವು. ಇವಳ ಮಾತು ತಿಳಿಯದೆ ಅವರು ಪತ್ರದ ಮೊರೆ ಹೋದರು. ನಂದೀಶ ತಾನು ಹೇಳಬೇಕೊ, ಬೇಡವೊ ಎಂಬ ಗೊಂದಲದಲ್ಲಿ ನಿಂತಿದ್ದ.

'ಡಾಕ್ಟ್ರು ಬೇಕು ಇದ್ಕೆ ಡಾಕ್ಟ್ರು. ಅವರನ್ನ ಕೇಳ್ಬೇಕು. ಸೈನ್ ಮಾಡೋಕು ಅವರೇ ಬೇಕು.. ಸಾಯಂಕಾಲ ಬರಬಹುದು. ಇಲ್ಲ ಅಂದ್ರೆ ನಾಳೆಯೇ..' ಅಂದ ಅವರಲ್ಲೊಬ್ಬ ಯಾವುದೇ ಧಾವಂತವಿಲ್ಲದೆ. 'ಒಂದು ಕೆಲ್ಸ ಮಾಡಿ ಅವ್ರ ಆಧಾರ್ ಕಾರ್ಡು ಮತ್ತು ರೇಷನ್ ಕಾರ್ಡು ಜೆರಾಕ್ಸ್ ಮಾಡ್ಸಿಕೊಂಡು, ಒಂದು ಅರ್ಜಿ ಬರೆದುಕೊಂಡು ಈ ಪತ್ರದ ಜೊತೆ ಕೊಡಿ.. ಡಾಕ್ಟ್ರು ಬಂದ ಕೂಡ್ಲೆ ಅವ್ರಿಗೆ ತಿಳಿಸುತ್ತೇನೆ' ಎನ್ನುತ್ತಾ ಮೊಬೈಲೊಳಗೆ ಮುಳುಗಿಹೋದ.

ಗಿರಿಜಿಯ ಬೆವರು ಇನ್ನಷ್ಟು ಕಿತ್ತು ಬಂತು. ಅವ್ರ ಆಧಾರ್ ಕಾರ್ಡು, ರೇಷನ್ ಕಾರ್ಡು ಈಗೆಲ್ಲಿ ತರೋದು.